ಓ ಎಸ್ ನಂಃ 418-14
ಪಿ ಡಬ್ಲ್ಯೂ ಃ 2

ದಿಃ 05-10-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ವಕೀಲರಿಂದ ಶ್ರೀ ಜೆ ಎ ಡಿ ಎನ್ ವಕೀಲರಿಂದ

24. ಈ ದಾವೆಯನ್ನು ನನ್ನ ತಂದೆ ನಮ್ಮ ಸಂರಕ್ಷಕರಾಗಿ 2014 ರಲ್ಲಿ ಹೂಡಿರುತ್ತಾರೆ. ಈ ದಾವೆಯನ್ನು ನಾನು ನನ್ನ ತಂದೆ, ತಂದೆಯ ಸಹೋದರರು ಮತ್ತು ಅವರ ಮಕ್ಕಳ ಮೇಲೆ ಹೂಡಿರುತ್ತೇನೆ. ನಾನು ಈ ದಾವೆಯನ್ನು ಯಾವ ಕಾರಣಕ್ಕಾಗಿ ಹೂಡಿದ್ದೇನೆ ನನಗೆ ಗೊತ್ತಿದೆ. ನಾನು ಈ ದಾವೆಯನ್ನು ಸರ್ವೇ ನಂ 40/11 ಬಿ, 28 ಮತ್ತು 31/1 ರ ಮೇಲೆ ಹೂಡಿರುತ್ತೇನೆ. 1 ನೇ ದಾವಾ ಆಸ್ತಿ ಹೊನ್ನೆನಹಳ್ಳಿ ಮುಖ್ಯರಸ್ತೆಯಲ್ಲಿರುತ್ತದೆ. 2 ನೇ ಮತ್ತು 3 ನೇ ದಾವಾ ಆಸ್ತಿಗಳು ಕುರುಬರಹಳ್ಳಿ ಗ್ರಾಮದಲ್ಲಿರುತ್ತದೆ. ದಾವಾ ಆಸ್ತಿಗಳು ಮೂಲತಃ ನನ್ನ ತಂದೆಯಾದ ಶ್ರೀಧರ್ ಮೂರ್ತಿರವರಿಗೆ ಸೇರಿರುತ್ತದೆ. ಶ್ರೀಧರ್ ಮೂರ್ತಿಯವರ ತಂದೆಯ ಹೆಸರು ಚಿಕ್ಕಮುನಿಸ್ವಾಮಪ್ಪ ಮತ್ತು ತಾಯಿಯ ಹೆಸರು ಲಕ್ಷ್ಮಮ್ಮ ಆಗಿರುತ್ತದೆ. ಚಿಕ್ಕಮುನಿಸ್ವಾಮಪ್ಪರವರ ಹೆಂಡತಿಯ ಹೆಸರು ಲಕ್ಷ್ಮಮ್ಮ ಅಲ್ಲ ಕೃಷ್ಣಮ್ಮ ಆಗಿರುತ್ತದೆ ಎಂದರೆ ನಿಜ. ಚಿಕ್ಕಮುನಿಸ್ವಾಮಪ್ಪರವರು ಯಾವಾಗ ತೀರಿಕೊಂಡಿರುತ್ತಾರೆ ಗೊತ್ತಿಲ್ಲ. ಕೃಷ್ಣಮ್ಮರವರು ನಾನುಚಿಕ್ಕ ಹುಡುಗ ಇದ್ದಾಗ ತೀರಿಕೊಂಡಿದ್ದು ಯಾವಾಗ ತೀರಿಕೊಂಡಿರುತ್ತಾರೆ ಗೊತ್ತಿಲ್ಲ. ಚಿಕ್ಕಮುನಿಸ್ವಾಮಪ್ಪ ಮತ್ತು ಕೃಷ್ಣಮ್ಮರವರಿಗೆ ಒಟ್ಟು ಎಂಟು ಜನ ಮಕ್ಕಳು ಅವರು ಗೋವರ್ಧನ್ ಶೆಟ್ಟಿ, ಶ್ರೀಧರ್ ಮೂರ್ತಿ, ಅಪ್ರಮೇಯ ಮೂರ್ತಿ, ಜನಾರ್ಧನ್ ಮೂರ್ತಿ, ಲಕ್ಷ್ಮೀನಾರಾಣಯಮ್ಮ, ಗೌರಮ್ಮ, ಶಾರದಮ್ಮ, ಮುನಿವೆಂಕಟಮ್ಮ ಆಗಿರುತ್ತಾರೆ. ಗೋವರ್ಧನ್ ಶೆಟ್ಟಿಯವರ ಹೆಂಡತಿಯ ಹೆಸರು ಜಯಮ್ಮ ಆಗಿರುತ್ತದೆ ಅವರಿಗೆ ಒಟ್ಟು 8 ಜನ ಮಕ್ಕಳು, ಅವರು ಮಂಜುಶ್ರಿ ಶೈಲ್, ಪ್ರೇಮ ಕುಮಾರ, ಕೇಶವ ಮೂರ್ತಿ, ಅಮರೇಶ್, ಮುರಾರಿ, ಶಾಂತಕುಮಾರ್, ಮಂಜುಳ ಮತ್ತು ಗಜಲಕ್ಷ್ಮಿ. ಮಂಜುಶ್ರೀ ಶೈಲ್ ರವರ ಹೆಂಡತಿಯ ಹೆಸರು ವಸಂತಲಕ್ಷ್ಮಿ ಆಗಿರುತ್ತದೆ ಅವರಿಗೆ 3 ಜನ ಮಕ್ಕಳಿದ್ದು, ಅವರ ಹೆಸರು ರಶ್ಮಿ, ರಮ್ಯ ಮತ್ತು ಕೈಲಾಸ್ ಆಗಿರುತ್ತದೆ. ಗೋವರ್ಧನ್ ಶೆಟ್ಟಿರವರಿಗೆ ಅಮರೇಶ್ ಮಗ ಆಗಿರುತ್ತಾರೆ ಎಂದರೆ ನಿಜ. ಅಮರೇಶ್ ರವರು ಚಂಪಾವತಿ ಎಂಬುವವರನ್ನು ಮದುವೆಯಾಗಿದ್ದರು ಎಂದರೆ ನಿಜ. ಅವರಿಗೆ 3 ಜನ ಮಕ್ಕಳು ಎಂದರೆ ನಿಜ. ಚಿಕ್ಕಮುನಿಸ್ವಾಮಪ್ಪ ಮತ್ತು ಕೃಷ್ಣಮ್ಮರವರ 2 ನೇ ಮಗ ಶ್ರೀಧರ ಮೂರ್ತಿ ಎಂದರೆ ನಿಜ. ಶ್ರೀಧರ ಮೂರ್ತಿರವರು ವೆಂಕಟಲಕ್ಷ್ಮಿರವರನ್ನು ಮದುವೆಯಾಗಿದ್ದರು ಎಂದರೆ ನಿಜ. ಶ್ರೀಧರ ಮೂರ್ತಿ ಹಾಗೂ ವೆಂಕಟಲಕ್ಷ್ಮಿರವರಿಗೆ ಮಕ್ಕಳು ಇರಲಿಲ್ಲ ಎಂದರೆ ನಿಜ.

25. 1 ನೇ ದಾವಾ ಆಸ್ತಿಯನ್ನು ನನ್ನ ತಾಯಿ ಆರ್ ವೆಂಕಟಲಕ್ಷ್ಮಿರವರು ಖರೀದಿ ಮಾಡಿರುತ್ತಾರೆ.

ಅದನ್ನು ದಿನಾಂಕಃ 22-06-1995 ರಂದು ಸಿದ್ದಪ್ಪರವರ ಕಡೆಯಿಂದ ಖರೀದಿ ಮಾಡಿರುತ್ತಾರೆ. 2 ನೇ ದಾವಾ ಆಸ್ತಿಯನ್ನು ದಿನಾಂಕಃ 27-03-2006 ರಂದು ನನ್ನ ತಂದೆ ಶ್ರೀಧರ ಮೂರ್ತಿಯವರು ಖರೀದಿ ಮಾಡಿರುತ್ತಾರೆ. ಅದೇ ರೀತಿ 3 ನೇ ದಾವಾ ಆಸ್ತಿಯನ್ನು ನನ್ನ ತಂದೆ ಶ್ರೀಧರ ಮೂರ್ತಿಯವರು ದಿನಾಂಕಃ 30-06-2005 ರಂದು ಖರೀದಿ ಮಾಡಿರುತ್ತಾರೆ. 3 ದಾವಾ ಆಸ್ತಿಗಳ ಮೇಲೆ ಶ್ರೀಧರ ಮೂರ್ತಿರವರು ತಮ್ಮ ಜೀವಿತಾವಧಿಯಲ್ಲಿ ಮೃತ್ಯುಪತ್ರವನ್ನು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಶ್ರೀಧರ ಮೂರ್ತಿರವರು ದಿನಾಂಕಃ 08-07-2006 ರಲ್ಲಿ ತೀರಿಕೊಂಡಿರುತ್ತಾರೆ. ಶ್ರೀಧರ ಮೂರ್ತಿರವರು ದಿನಾಂಕಃ 22-04-2006 ರಂದು ಮಂಜುಶ್ರಿಶೈಲ್, ಮುರಾರಿ ಮತ್ತು ಅಮರೇಶ್ ರವರ ಹೆಸರಿಗೆ ದಾವಾ ಆಸ್ತಿಗಳ ಮೇಲೆ ಮೃತ್ಯುಪತ್ರ ಬರೆದಿರುತ್ತಾರೆ ಎಂದರೆ ಸರಿಯಲ್ಲ.ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ನನ್ನ ತಂದೆ ಬರೆಸಿರುತ್ತಾರೆ ಎಂದರೆ ನಾನು, ನನ್ನ ತಂದೆ ಮತ್ತು ನನ್ನ ವಕೀಲರು ಸೇರಿದ್ದು ನಾನೇ ಬರೆಸಿರುತ್ತೇನೆ ಎಂದು ಹೇಳುತ್ತಾರೆ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**